





# ಮಂಗಳೂರು ಆಶ್ರಮದಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ

ಸ್ವಾಮಿ ವಿವೇಕಾನಂದರ ಐತಿಹಾಸಿಕ ಚಿಕಾಗೋ ಉಪನ್ಯಾಸಗಳ ೧೨೫ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಮಂಗಳೂರು ರಾಮಕೃಷ್ಣ ಮಠವು ಏರ್ಪಡಿಸಿದ **ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವು** ೨೦೧೮ರ ಆಗಸ್ಟ್ ೧೦ ರಂದು ನೆರವೇರಿತು. ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪ್ರೊ .ಪಿ.ಎಸ್.ಯಡಂಬಡಿತ್ತಾಯ ಅವರು ಸಂಕಿರಣವನ್ನು ಉದ್ಘಾಟಿಸಿದರು.

ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹ ಕಾರ್ಯದರ್ಶಿಗಳಾದ ಸ್ವಾಮಿ ಸತ್ಯೇಶಾನಂದಜಿ ಮಹಾರಾಜ್ ಅವರು ಮುಖ್ಯ ಅತಿಥಿಯಾಗಿದ್ದರು. ಉದ್ಘಾಟನಾ ಭಾಷಣವನ್ನು ಮಾಡುತ್ತ ಮಾತನಾಡಿದ ಪ್ರೊ. ಯಡಂಬಡಿತ್ತಾಯ ಅವರು, ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ನೀಡಿದ ಉಪನ್ಯಾಸಗಳು ಎಷ್ಟೊಂದು ಮಹತ್ವದ್ದಾಗಿವೆ ಎಂಬುದನ್ನು ಒತ್ತಿಹೇಳುತ್ತ, ಆಧುನಿಕತೆಯ ಗೊಂದಲಗಳಲ್ಲಿ ನಲುಗಿಹೋಗಿರುವ ಜಗತ್ತಿಗೆ ಅವು ಅತ್ಯಂತ ಪ್ರಸ್ತುತವಾಗಿವೆ ಎಂದು ಅಭಿಪ್ರಾಯಪಟ್ಟರು. ಸ್ವಾಮಿ ಸತ್ಯೇಶಾನಂದಜಿಯವರು ಮಾತನಾಡುತ್ತ, ಇಂದಿನ ಯುವಪೀಳಿಗೆಯು ಸ್ವಾಮೀಜಿಯವರ ಉದಾತ್ತ ಸಂದೇಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಹಾಗೂ ಆ ಮೂಲಕ ತಮ್ಮ ವ್ಯಕ್ತಿತ್ವವನ್ನು ಸ್ವಾಮೀಜಿಯವರ ಧ್ಯೇಯ–ಆದರ್ಶಗಳಿಗೆ ಅನುಗುಣವಾಗಿ ರೂಪಿಸಿಕೊಳ್ಳುವ ಅಗತ್ಯವಿದೆ ಎಂದರು.

ಉದ್ಘಾಟನಾ ಸಮಾರಂಭದ ನಂತರ ಪ್ರಧಾನ ಭಾಷಣಗಳನ್ನೊಳಗೊಂಡ ಗೋಷ್ಠಿಗಳು ಆರಂಭವಾದವು. ದಾವಣಗೆರೆ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ನಿತ್ಯಸ್ಥಾನಂದಜಿಯವರು 'ಜಗತ್ತಿನ ಚಿಂತನೆಯ ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವ' ಎಂಬ ವಿಷಯವನ್ನು ಕುರಿತು ಮಾತನಾಡಿದರು. ಕೊಚ್ಚಿಯ ಕಾರ್ಪೊರೇಟ್ ತರಬೇತುದಾರರಾದ ಪ್ರೊ. ವಿಜಯ ಮೆನನ್ ಅವರು ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ಹಿನ್ನೆಲೆ ಮತ್ತು ಮಹತ್ವವನ್ನು ಕುರಿತು ಮಾತನಾಡಿದರು. ಬೆಂಗಳೂರಿನ ಶ್ರೀಮತಿ ಸ್ವಾತಿ ರಾಮ್ ಅವರು ' ಸ್ವಾಮಿ ವಿವೇಕಾನಂದರ ಸೇವೆಯ ಪರಿಕಲ್ಪನೆ' ಎಂಬ ವಿಷಯದ ಬಗ್ಗೆ ಮಾತನಾಡಿದರು. ಬೆಂಗಳೂರಿನ ಮನಸ್ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ರಘೋತ್ತಮ ರಾವ್ ಅವರು 'ಸ್ಫೂರ್ತಿಯ ಚಿಲುಮೆ ಸ್ವಾಮಿ ವಿವೇಕಾನಂದರು' ಎಂಬ ವಿಷಯವನ್ನು ಕುರಿತು ಮಾತನಾಡಿದರು.

ಎಡೆಬಿಡದೆ ಸುರಿಯುತ್ತಿದ್ದ ಜಡಿಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಶಾಲೆ–ಕಾಲೇಜುಗಳಿಗೆ ರಜೆ ಘೋಷಿಸಿದ್ದರೂ, ದಿನಪೂರ್ತಿ ನಡೆದ ಈ ಸಂಕಿರಣದಲ್ಲಿ ೬೩೫ ಮಂದಿ ಯುವಕರು ಹಾಗೂ ಇತರ ಗಣ್ಯರು ಉತ್ಸಾಹದಿಂದ ಭಾಗವಹಿಸಿದ್ದು ಅತ್ಯಂತ ವಿಶೇಷವಾಗಿತ್ತು. ಪ್ರತಿನಿಧಿಗಳಿಗೆ ಚಹಾ, ತಿಂಡಿ, ಊಟದ ವ್ಯವಸ್ಥೆಯಿತ್ತು; ಅವರಿಗೆ ಭಾಗವಹಿಸಿದ ಬಗ್ಗೆ ಸರ್ಟಿಫಿಕೇಟ್ ಹಾಗೂ ಉಡುಗೊರೆ ಪುಸ್ತಕಗಳನ್ನು ನೀಡಲಾಯಿತು.






Managing Editor : Swami Muktidananda    Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020